


بسم اللهِ الرّحمٰن الرّحيم

# ಪ್ರವಾದಿ ಚರಿತ್ರೆ – ಬನೂ ಮುಸ್ತಲಖ್ ದಂಡಯಾತ್ರೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **19–07–2024** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ)**

أَشْهَدُ أَنْ لَّا إِلٰهَ إِلَّا اللهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ. بِسْمِ اللهِ الرَّحْمٰنِ الرَّحِيْمِ.

اَلْحَمْدُ لِلّٰهِ رَبِّ الْعٰلَمِيْنَ. اَلرَّحْمٰنِ الرَّحِيْمِ. مٰلِكِ يَوْمِ الدِّيْنِ. إِيَّاكَ نَعْبُدُ وَإِيَّاكَ نَسْتَعِيْنُ.

اِهْدِنَا الصِّرَاطَ الْمُسْتَقِيْمَ. صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ.

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಮುಸ್ತಲಖ್ ಯುದ್ಧದ ಪ್ರಸ್ತಾಪ ಕಳೆದ ಖುತ್ಬದಲ್ಲಿ ನಡಯುತ್ತಿತ್ತು. ಇದರ ಇನ್ನಷ್ಟು ವಿವರಣೆ ಹದೀಸುಗಳಲ್ಲಿ ಮತ್ತು ಚರಿತ್ರೆಗಳಲ್ಲಿ ಲಭಿಸುತ್ತದೆ. ಸಹೀಹ್ ಬುಖಾರಿಯಲ್ಲಿ ಇದನ್ನು ವಿವರಿಸುತ್ತಾ ಹೀಗೆ ಬರೆಯಲಾಗಿದೆ: ಹಝ್ರತ್ ಪೈಗಂಬರ್(ಸ) ಬನೂ ಮುಸ್ತಲಖ್ ಗೋತ್ರದವರ ಮೇಲೆ ದಾಳಿ ನಡೆಸಿದಾಗ ಅವರು ಅಜಾಗರೂಕರಾಗಿದ್ದರು.

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಘಟನೆಗೆ ಸಂಬಂಧಿಸಿ ಹೇಳುತ್ತಾರೆ: ಈ ಯುದ್ಧದ ಕುರಿತು ಸಹೀಹ್ ಬುಖಾರಿಯಲ್ಲಿ ಹೀಗೊಂದು ವರದಿಯಿದೆ: ಬನೂ ಮುಸ್ತಲಖ್ ಗೋತ್ರದವರು ಅಜಾಗರೂಕರಾಗಿ ಇದ್ದ ಸ್ಥಿತಿಯಲ್ಲಿ ಮತ್ತು ತಮ್ಮ ಜಾನುವಾರುಗಳಿಗೆ ನೀರು ಕುಡಿಸುತ್ತಿದ್ದ ವೇಳೆ ಹಝ್ರತ್ ಪೈಗಂಬರ್(ಸ) ಅವರ ಮೇಲೆ ದಾಳಿ ನಡೆಸಿದರು. ಚಿಂತಿಸಿ ನೋಡುವುದಾದರೆ ಈ ವರದಿ ಚರಿತ್ರೆಗಾರರ ವರದಿಗೆ ವಿರುದ್ಧವಲ್ಲ. ಸತ್ಯದಲ್ಲಿ ಈ ಎರಡು ವರದಿಗಳು ಎರಡು ಸಮಯಗಳಿಗೆ ಸಂಬಂಧಿಸಿಯಾಗಿವೆ. ಘಟನೆಯೇನೆಂದರೆ, ಇಸ್ಲಾಮಿನ ಸೇನೆ ಬನೂ ಮುಸ್ತಲಖ್ ಗೋತ್ರದ ಸಮೀಪಕ್ಕೆ ತಲುಪಿದಾಗ, ಇಸ್ಲಾಮಿನ ಸೇನೆ ಬರುವುದರ ಬಗ್ಗೆ ಅವರಿಗೆ ಖಂಡಿತವಾಗಿಯೂ ಅರಿವಿತ್ತಾದರೂ ಮುಸ್ಲಿಮರು ಇಷ್ಟು ಸಮೀಪಕ್ಕೆ ತಲುಪಿದ್ದಾರೆ ಎಂಬ ಸಂಗತಿ ಅವರಿಗೆ ಗೊತ್ತಿರಲಿಲ್ಲ. ಆದ್ದರಿಂದ ಅವರು ಸಮಾಧಾನದಿಂದ ಮತ್ತು ಯಾವುದೇ ಸಿದ್ಧತೆಯಿಲ್ಲದೇ ಕುಳಿತುಕೊಂಡಿದ್ದರು. ಇದೇ ಸ್ಥಿತಿಯ ಬಗ್ಗೆ ಬುಖಾರಿಯ ವರದಿಯಲ್ಲಿ ಸೂಚಿಸಲಾಗಿದೆ. ಆದರೆ ಅವರಿಗೆ ಇಸ್ಲಾಮಿನ ಸೇನೆ ತಲುಪಿದ ಬಗ್ಗೆ ಗೊತ್ತಾದಾಗ ಹಿಂದಿನ ಸ್ಥಾಯಿಯಾದ ತಯಾರಿಯ ಅನುಸಾರ ಬೇಗನೇ ಪಂಕ್ತಿ ಮಾಡಿ ಯುದ್ಧಕ್ಕಾಗಿ ತಯಾರಾದರು. ಈ ಸ್ಥಿತಿಯ ಬಗ್ಗೆ ಚರಿತ್ರೆಗಾರರು ಬರೆದಿರುವರು.

ಈ ಯುದ್ಧದಲ್ಲಿ ಒಬ್ಬರೇ ಸಹಾಬಿ ಶಹೀದ್ ಆಗಿದ್ದರು. ಅದು ಕೂಡ ಪ್ರಮಾದದಿಂದ ಆಗಿತ್ತು. ಒಬ್ಬ ಮುಸ್ಲಿಮನು ಅವರನ್ನು ಕಾಫಿರ್ ಎಂದು ಭಾವಿಸಿ ಶಹೀದ್ ಮಾಡಿದ್ದರು.

ಉಮ್ಮುಲ್ ಮುಅ್‌ಮಿನೀನ್ ಹಝ್ರತ್ ಜುವೈರಿಯ(ರ) ಹೇಳುತ್ತಾರೆ: ಈ ಯುದ್ಧದಂದು ನನ್ನ ತಂದೆ ಹೀಗೆ ಹೇಳುತ್ತಿರುವುದಾಗಿ ನಾನು ಆಲಿಸಿದ್ದೇನೆ: ಎಷ್ಟು ದೊಡ್ಡ ಸೈನ್ಯ ಆಗಮಿಸಿದೆ ಎಂದರೆ, ಅದನ್ನು ಎದುರಿಸಲು ನಮಗೆ ಸಾಮರ್ಥ್ಯವಿಲ್ಲ. ಹಝ್ರತ್ ಜುವೈರಿಯ(ರ) ಹೇಳುತ್ತಾರೆ: ನಾನು ಸ್ವತಃ ಎಷ್ಟು ಹೆಚ್ಚು ಜನರನ್ನು, ಆಯುಧಗಳನ್ನು ಮತ್ತು ಕುದುರೆಗಳನ್ನು ನೋಡಿದ್ದೆ ಎಂದರೆ, ಅದನ್ನು ನನಗೆ ವಿವರಿಸಲು ಸಾಧ್ಯವಿಲ್ಲ. ನಾನು ಇಸ್ಲಾಂ ಸ್ವೀಕಾರ ಮಾಡಿದ ನಂತರ ಹಝ್ರತ್ ಪೈಗಂಬರ್(ಸ) ನನ್ನೊಂದಿಗೆ ವಿವಾಹ ಮಾಡಿದರು. ನಾವು ಮರಳಿ ಬಂದಾಗ ನಾನು ನೋಡಿದ್ದೇನೆಂದರೆ, ಮುಸ್ಲಿಮರು ನನಗೆ ಹಿಂದಿನಂತೆ ಅಧಿಕವಿರುವುದಾಗಿ ತೋರುತ್ತಿರಲಿಲ್ಲ. ಅದು ಮುಶ್ರಿಕರ ಹೃದಯಗಳಲ್ಲಿ ಅಲ್ಲಾಹನು ಹಾಕುವ ಭಯವಾಗಿದೆ ಎಂದು ಆಗ ನನಗೆ ಗೊತ್ತಾಯಿತು.

ಯುದ್ಧ ಸಂಪತ್ತಾಗಿ ಲಭಿಸಿದ ಒಂಟೆಗಳ ಸಂಖ್ಯೆ ಎರಡು ಸಾವಿರ, ಆಡುಗಳ ಸಂಖ್ಯೆ ಐದು ಸಾವಿರ ಆಗಿತ್ತು ಹಾಗೂ ಕೈದಿಗಳ ಸಂಖ್ಯೆ ಇನ್ನೂರು ಕುಟುಂಬಗಳನ್ನು ಒಳಗೊಂಡಿತ್ತು. ಕೆಲವು ಚರಿತ್ರೆಗಾರರು ಕೈದಿಗಳ ಸಂಖ್ಯೆ ಏಳು ನೂರಕ್ಕಿಂತ ಅಧಿಕವೆಂದೂ ಹೇಳಿರುವರು. ಹಝ್ರತ್ ಪೈಗಂಬರ್(ಸ) ಹಝ್ರತ್ ಬುರೈದ(ರ)ರನ್ನು ಆ ಕೈದಿಗಳ ಮೇಲ್ನೋಟಗಾರನನ್ನಾಗಿ ನೇಮಿಸಿದರು.

ಹಝ್ರತ್ ಪೈಗಂಬರ್(ಸ) ಪೂರ್ತಿ ಯುದ್ಧ ಸಂಪತ್ತಿನಿಂದ ಐದನೇ ಒಂದು ಭಾಗವನ್ನು ಬೇರ್ಪಡಿಸಿದರು. ಅದು ಅಲ್ಲಾಹನ ಆದೇಶ ಪ್ರಕಾರ ಬೇರ್ಪಡಿಸಲಾಗುವ ಭಾಗವಾಗಿದೆ. ಅದನ್ನು ಅಲ್ಲಾಹನು, ಅಲ್ಲಾಹನ ಪ್ರವಾದಿ ಮತ್ತು ಪ್ರವಾದಿಯ ನಿಕಟ ಸಂಬಂಧಿಕರಿಗೆ ಹಾಗೂ ಇಸ್ಲಾಮಿನ ಸಾಮೂಹಿಕ ಅಗತ್ಯಗಳಿಗೆ ಬೇರ್ಪಡಿಸಲಾಗುತ್ತದೆ.

ಈ ಗೋತ್ರದ ಬಂಧಿಯಾದ ಜನರಲ್ಲಿ ಅವರ ಸರದಾರ ಹಾರಿಸ್ ಬಿನ್ ಅಬೀ ಝಿರಾರ್‌ನ ಪುತ್ರಿಯಾದ ಬರ್ರ ಕೂಡ ಇದ್ದರು. ಅವರ ಹೆಸರನ್ನು ಬದಲಾಯಿಸಿ ಹಝ್ರತ್ ಪೈಗಂಬರ್(ಸ) ಜುವೈರಿಯ ಎಂದು ಇಟ್ಟರು. ಕೈದಿಗಳ ವಿತರಣೆ ವೇಳೆ ಜುವೈರಿಯ(ರ) ಒಬ್ಬ ಅನ್ಸಾರಿ ಸಹಾಬಿಯಾದ ಸಾಬಿತ್ ಬಿನ್ ಖೈಸ್(ರ)ರಿಗೆ ಒಪ್ಪಿಸಲಾಗಿತ್ತು. ಸಾಬಿತ್ ಬಿನ್ ಖೈಸ್‌ರೊಂದಿಗೆ ಮುಕಾತಿಬತ್‌ನ ರೂಪದಲ್ಲಿ ಬರ್ರ ಒಪ್ಪಂದ ಮಾಡಿದ್ದರು. (ಮುಕಾತಿಬತ್ ಎಂದರೆ, ದಾಸಿ ಅಥವಾ ಗುಲಾಮನು ತನ್ನ ಮಾಲಿಕನಿಗೆ ಏನಾದರೂ ಪರಿಹಾರಧನವನ್ನು ಕೊಟ್ಟು ಸ್ವತಂತ್ರಗೊಳ್ಳುವುದಾಗಿದೆ. ಇಲ್ಲಿ ನಿಶ್ಚಯಿಸಲಾದ ಮೊಬಲಗು ಒಂಬತ್ತು ಔಖಿಯ ಚಿನ್ನವಾಗಿತ್ತು. ಅದರ ಬೆಲೆ ಮುನ್ನೂರ ಆರುವತ್ತು ದಿರ್ಹಮ್ ಆಗಿದೆ.) ಈ ಒಪ್ಪಂದದ ನಂತರ ಬರ್ರ ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾದರು ಮತ್ತು ಎಲ್ಲ ಅವಸ್ಥೆಗಳನ್ನು ಹೇಳಿದರು. ತಾನು ಬನೂ ಮುಸ್ತಲಖ್ ಗೋತ್ರದ ಸರದಾರನ ಪುತ್ರಿಯಾಗಿರುವೆ ಎಂದು ಹೇಳಿ ಪರಿಹಾರ ಧನಕ್ಕಾಗಿ ಹಝ್ರತ್ ಪೈಗಂಬರ್(ಸ)ರ ನೆರವನ್ನು ಕೇಳಿದರು. ಈ ಘಟನೆಯಿಂದ ಹಝ್ರತ್

ಪೈಗಂಬರ್(ಸ) ಪ್ರಭಾವಿತರಾದರು ಮತ್ತು ಆಕೆ ಪ್ರಸಿದ್ಧ ಗೋತ್ರದ ಸರದಾರನ ಪುತ್ರಿಯಾಗಿರುವುದರಿಂದ ಅವಳನ್ನು ವಿವಾಹ ಮಾಡಿದರೆ ಅವಳ ಗೋತ್ರದವರಿಗೆ ತಬ್ಲೀಗ್ ಮಾಡುವುದು ಸುಲಭವಾಗುವುದು ಎಂದು ಭಾವಿಸಿಕೊಂಡು ಅವಳನ್ನು ತಾನು ವಿವಾಹ ಮಾಡಲು ಉದ್ದೇಶಿಸಿದರು. ಬರ್ರ ಅದಕ್ಕೆ ಸಮ್ಮತಿ ಸೂಚಿಸಿದಾಗ ಹಝ್ರತ್ ಪೈಗಂಬರ್(ಸ) ಪರಿಹಾರಧನವನ್ನು ಪಾವತಿಸಿ ಅವರೊಂದಿಗೆ ವಿವಾಹ ಮಾಡಿಕೊಂಡರು.

ಸಹಾಬಿಯರು ಇದನ್ನು ನೋಡಿದಾಗ ಹಝ್ರತ್ ಪೈಗಂಬರ್(ಸ)ರ ಪತ್ನಿಯ ಮನೆಯವರನ್ನು ತಮ್ಮ ಕೈಗಳಲ್ಲಿ ಬಂಧಿಯಾಗಿ ಇಡುವುದನ್ನು ಇಷ್ಟಪಡಲಿಲ್ಲ. ಆದ್ದರಿಂದ ನೂರು ಕುಟುಂಬದವರನ್ನು ಎಂದರೆ ನೂರಾರು ಕೈದಿಗಳನ್ನು ಪರಿಹಾರಧನವನ್ನು ಪಡೆಯದೇ ಒಂದೇ ಕ್ಷಣದಲ್ಲಿ ಸ್ವತಂತ್ರಗೊಳಿಸಲಾಯಿತು. ಆದ್ದರಿಂದಲೇ ಹಝ್ರತ್ ಆಯಿಶ(ರ) ಹೀಗೆ ಹೇಳುತ್ತಿದ್ದರು: ಜುವೈರಿಯ ತನ್ನ ಸಮುದಾಯಕ್ಕಾಗಿ ಅತ್ಯಂತ ಅನುಗ್ರಹೀತ ಮಹಿಳೆಯಾದಳು.

ಹಝ್ರತ್ ಪೈಗಂಬರ್(ಸ) ಈ ಯುದ್ಧದಿಂದ ವಿಜಯಿ ಮತ್ತು ಯಶಸ್ವಿಯಾಗಿ ಮರಳಿ ಬಂದರು. ಒಟ್ಟು 28 ದಿನಗಳು ಅವರು ಮದೀನದಿಂದ ಹೊರಗೆ ಇದ್ದರು.

ಈ ಯುದ್ಧದಿಂದ ಮರಳಿ ಬರುವಾಗಲೇ ಕಪಟವಿಶ್ವಾಸಿಗಳ ನೇತಾರ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸಲೂಲ್‌ನ ಕಪಟತೆ ಸ್ಪಷ್ಟವಾಗಿ ಬಯಲಾಯಿತು. ಒಂದು ಘಟನೆಯಲ್ಲಿ ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸಲೂಲ್ ಖುರೈಶ್ ಮತ್ತು ಹಝ್ರತ್ ಪೈಗಂಬರ್(ಸ)ರ ವಿರುದ್ಧ ತನ್ನ ಗೋತ್ರದವರನ್ನು ಪುಸಲಾಯಿಸಲು ಪ್ರಯತ್ನಿಸಿದನು ಮತ್ತು ಕೊನೆಗೆ ಹೀಗೆಯೂ ಹೇಳಿದನು: ಮದೀನಕ್ಕೆ ತಲುಪಿ ಅತ್ಯಂತ ಆದರಣೀಯ ವ್ಯಕ್ತಿ ಅತ್ಯಂತ ನೀಚ ವ್ಯಕ್ತಿಯನ್ನು ಪಟ್ಟಣದಿಂದ ಹೊರಗೆ ಹಾಕುವನು. ಝೈದ್ ಬಿನ್ ಅರ್‌ಖಮ್(ರ) ಈ ಸಂದರ್ಭದಲ್ಲಿ ಧರ್ಮಾಭಿಮಾನವನ್ನು ತೋರಿಸುತ್ತಾ ಅಬ್ದುಲ್ಲಾಹ್ ಬಿನ್ ಉಬಯ್‌ನ ಮಾತನ್ನು ತಡೆದರು ಮತ್ತು ಹೀಗೆ ಹೇಳಿದರು: ನಿನ್ನ ಸಮುದಾಯದಲ್ಲಿ ನೀನೇ ಅತ್ಯಂತ ನೀಚನು. ಅನಂತರ ಅವರು ಹಝ್ರತ್ ಪೈಗಂಬರ್(ಸ)ರ ಬಳಿಗೆ ಹೋಗಿ ಎಲ್ಲವನ್ನು ಹೇಳಿದರು. ಹಝ್ರತ್ ಪೈಗಂಬರ್(ಸ) ಝೈದ್‌ನ ಮಾತನ್ನು ಇಷ್ಟಪಡಲಿಲ್ಲ ಮತ್ತು ಹೀಗೆ ಹೇಳಿದರು: ಎಲೈ ಹುಡುಗ, ನಿನಗೆ ಬಹುಶಃ ಅಬ್ದುಲ್ಲಾಹ್ ಬಿನ್ ಉಬಯ್‌ನ ಮೇಲೆ ಕೋಪವಿದೆ. ವರದಿಗಳಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ – ಅನಂತರ ಅಬ್ದುಲ್ಲಾಹ್ ಬಿನ್ ಉಬಯ್ ಸ್ವತಃ ಅಥವಾ ಬೇರೆಯವರ ಪ್ರೇರಣೆ ಪ್ರಕಾರ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದನು ಮತ್ತು ಅಲ್ಲಾಹನ ಮೇಲೆ ಆಣೆ ಹಾಕಿಕೊಂಡು ಝೈದ್ ಹೇಳಿದೆಲ್ಲವೂ ಸುಳ್ಳು ಎಂದು ಹೇಳಿದನು.

(ಹುಝೂರ್ ಹೇಳಿದರು:) ಅಬ್ದುಲ್ಲಾಹ್ ಬಿನ್ ಉಬಯ್ ಖಂಡಿತವಾಗಿಯೂ ಹಾಗೆ ಹೇಳಿದ್ದನು ಎಂದು ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಿತ್ತು. ಅನಂತರ ಹಝ್ರತ್ ಪೈಗಂಬರ್(ಸ) ಹೊರಡಲು ಆದೇಶ ನೀಡಿದರು. ಅನ್ಸಾರಿನ ಕೆಲವು ಸರದಾರರು ಈ ಕುರಿತು ಕೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮ ಜೊತೆಗಾರನು ಏನು ಹೇಳಿರುವನು ಎಂದು ನಿಮಗೆ ಗೊತ್ತಿಲ್ಲವೇ? ಮದೀನಕ್ಕೆ ಮರಳಿ ಹೋಗಿ ಅತ್ಯಂತ ಆದರಣೀಯ ವ್ಯಕ್ತಿ ಅತ್ಯಂತ ನೀಚ ವ್ಯಕ್ತಿಯನ್ನು ಪಟ್ಟಣದಿಂದ ಹೊರಗೆ ಹಾಕುವನು ಎಂದು ಆತನು ಹೇಳಿರುವನು. ಇದನ್ನು ಆಲಿಸಿ ನಿಷ್ಠಾವಂತರಾದ ಅನ್ಸಾರ್ ಸಹಾಬಿಯರು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಖಂಡಿತವಾಗಿಯೂ ನೀವು ಅತ್ಯಂತ ಆದರಣೀಯರಾಗಿರುವಿರಿ. ಎಲ್ಲ ಗೌರವಗಳು ಅಲ್ಲಾಹನಿಗೂ ಅವನ ಪ್ರವಾದಿಗೂ ಆಗಿವೆ. ನೀವು ಇಷ್ಟಪಡುವುದಾದರೆ ಅಬ್ದುಲ್ಲಾಹ್ ಬಿನ್ ಉಬಯ್‌ನನ್ನು ಪಟ್ಟಣದಿಂದ ಹೊರಗೆ ಹಾಕುವೆವು. ಅಥವಾ ನೀವು ಇಷ್ಟಪಡುವುದಾದರೆ ಆತನೊಡನೆ ಸೌಮ್ಯವಾಗಿ ವರ್ತಿಸಲಾಗುವುದು.

ಹುಝೂರ್ ಹೇಳಿದರು: ಅಬ್ದುಲ್ಲಾಹ್ ಬಿನ್ ಉಬಯ್ ಹೇಳಿದ ಮಾತಿನ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ನೀಡಿದ ವಿವರಣೆಯನ್ನು ಮುಂದಿನ ಬಾರಿ ವಿವರಿಸುತ್ತೇನೆ. ಇನ್‌ಶಾ ಅಲ್ಲಾಹ್.

(ಅನಂತರ ಹುಝೂರ್ ಹೇಳಿದರು:) ಮುಂದಿನ ಜುಮಾದಿಂದ ಬ್ರಿಟನಿನ ವಾರ್ಷಿಕ ಜಲ್ಸ ಆರಂಭವಾಗುವುದು. ಅದಕ್ಕಾಗಿಯೂ ದುಆ ಮಾಡಿರಿ. ಅಲ್ಲಾಹನು ಎಲ್ಲ ವಿಧದಲ್ಲೂ ಅನುಗ್ರಹೀತಗೊಳಿಸಲಿ. ಎಲ್ಲ ಕಾರ್ಯಕರ್ತರಿಗೂ ಉನ್ನತ ಸ್ವಭಾವಗುಣಗಳನ್ನು ತೋರಿಸುತ್ತಾ ತ್ಯಾಗ ಮನೋಭಾವದಿಂದ ತಮ್ಮ ಕರ್ತವ್ಯಗಳನ್ನು ನೆರವೇರಿಸಲು ಅಲ್ಲಾಹನು ಸೌಭಾಗ್ಯ ನೀಡಲಿ. ಆಗಮಿಸಿರುವ ಮತ್ತು ಯಾತ್ರೆಯಲ್ಲಿರುವ ಅತಿಥಿಗಳನ್ನು ಅಲ್ಲಾಹನು ಸಂರಕ್ಷಿಸಲಿ. ಆಮೀನ್.

(ಖುತ್ಬದ ಕೊನೆಯ ಭಾಗದಲ್ಲಿ ಮೂವರು ದಿವಂಗತರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝ ಗ್ಹಾಯಿಬ್ ನಿರ್ವಹಿಸುವುದಾಗಿ ಹುಝೂರ್ ಹೇಳಿದರು.) ಮೊದಲನೆಯದಾಗಿ ದಅ್‌ವತೇ ಇಲಲ್ಲಾಹ್ ಶುಮಾಲಿ ಹಿಂದ್‌ನ ನಾಝಿರ್ ಹಮೀದ್ ಕೌಸರ್ ಸಾಹಿಬ್‌ರ ಪತ್ನಿಯಾದ ದಿವಂಗತ ಸಲೀಮ ಬಾನೂ ಸಾಹಿಬರದ್ದು. ದಿವಂಗತರು ಮೂಸಿಯಾಗಿದ್ದರು. ಅತಿಥಿ ಸತ್ಕಾರಿ, ಸರಳ ಸ್ವಭಾವಿ, ಪ್ರಾರ್ಥಿಸುವ ಮತ್ತು ನಫ್ಲ್ ನಮಾಝ್‌ಗಳನ್ನು ಅನುಷ್ಠಿಸುವ, ಮಿತವ್ಯಯಿ ಮಹಿಳೆಯಾಗಿದ್ದರು. ಅವರಿಗೆ ಲಜ್ನ ಇಮಾಇಲ್ಲಾಹ್ ಸದರ್ ಆಗಿ ಮುಂಬಯಿಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ದಿವಂಗತರ ಪತಿ ಕಬಾಬೀರ್‌ನಲ್ಲಿ ಮುಬಲ್ಲಿಗ್ ಆಗಿ ಇದ್ದಾಗ ಅಲ್ಲಿ ಬಹಳ ಬೇಗನೇ ಅರಬಿ ಭಾಷೆ ಮಾತನಾಡಲು ಕಲಿತರು ಮತ್ತು ಮಹಿಳೆಯರ ಶಿಕ್ಷಣ ಮತ್ತು ತರಬೇತಿಯಲ್ಲಿ ಪೂರ್ಣವಾಗಿ ಭಾಗಿಯಾದರು. ದಿವಂಗತರಿಗೆ ದೀರ್ಘಕಾಲ ಕಬಾಬೀರ್‌ನಲ್ಲಿ ಸದರ್ ಲಜ್ನಾ ಇಮಾಇಲ್ಲಾಹ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಅವರು ಕಬಾಬೀರ್‌ನಲ್ಲಿ ಇಜ್ತಿಮಾ ನಡೆಸಲು ಆರಂಭಿಸಿದರು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಲಜ್ನ ಇಮಾಇಲ್ಲಾಹ್ ಕಬಾಬೀರ್‌ನ ಇಜ್ತಿಮಾಗೆ ಸಂಬಂಧಪಟ್ಟು ಅವರನ್ನು ಶ್ಲಾಘಿಸುತ್ತಾ ಹೀಗೆ ಹೇಳಿದರು: ಲಜ್ನ ಇಮಾಇಲ್ಲಾಹ್ ಕಬಾಬೀರ್ ಪೂರ್ಣವಾಗಿಯೂ ಅರೇಬಿಯದ ಮಹಿಳೆಯರನ್ನು ಒಳಗೊಂಡಿರುವುದಾಗಿದೆ. ಅವರಲ್ಲಿ ಕೇವಲ ಒಬ್ಬರು ಭಾರತದ ಕಾಶ್ಮೀರದಿಂದ ಹೋಗಿರುವ ಮಹಿಳೆಯಾಗಿದ್ದಾರೆ. ಆದರೆ ಅವರು

ಈಗ ಪೂರ್ಣವಾಗಿಯೂ ಅರೇಬಿಯರ ಹಾಗೆ ಆಗಿ ಬಿಟ್ಟಿದ್ದಾರೆ. ಅರೇಬಿಯರೊಂದಿಗೆ ಸೇರಿಕೊಂಡು ಅವರು ಅವರ ತರಬೇತಿ ಮಾಡಿದರು.

ದಿವಂಗತರು ಒಬ್ಬಳು ಪುತ್ರಿ ಮತ್ತು ಇಬ್ಬರು ಪುತ್ರರನ್ನು ಅಗಲಿರುವರು. ಅವರ ಒಬ್ಬ ಪುತ್ರನಾದ ಅತಾಉಲ್ ಮಜೀದ್ ಮುಬಶ್ಶಿರ್ ಕೌಸರ್ ಎಂ.ಟಿ.ಎ. ಅಲ್‌ಅರೇಬಿಯ ಯು.ಕೆ.ಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪುತ್ರಿಯಾದ ಬುಶ್ರಾ ಕೌಸರ್ ಸಾಹಿಬ ಡಾಕ್ಟರ್ ಐಮನ್ ಓದೆಯರ ಪತ್ನಿಯಾಗಿದ್ದಾರೆ. ಅವರು ಲಜ್ನಾ ಇಮಾಇಲ್ಲಾಹ್ ಹಾಲೇಂಡ್‌ನಲ್ಲಿ ನೇಶನಲ್ ಸೆಕ್ರಟರಿ ಖಿದ್‌ಮತೇ ಖ಼ಲ್‌ಕ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಿರಿಯ ಪುತ್ರನಾದ ಶರೀಫ್ ಕೌಸರ್ ಖಾದಿಯಾನಿನಲ್ಲಿ ಜಮಾಅತಿನ ಮುರಬ್ಬಿ, ಖುದ್ದಾಮುಲ್ ಅಹ್ಮದಿಯಾದ ನಾಯಿಬ್ ಸದರ್ ಮತ್ತು ಆಡಿಯೋ ವೀಡಿಯೋ ವಿಭಾಗದ ಎಡಿಶನಲ್ ಇನ್‌ಚಾರ್ಜ್ ಆಗಿರುವರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಅವರ ಒಳಿತುಗಳನ್ನು ಮಕ್ಕಳಲ್ಲೂ ಜಾರಿಯಲ್ಲಿರಿಸಲಿ.

ಎರಡನೆಯದಾಗಿ ಲಾಹೋರಿನ ದಿವಂಗತ ನೂರುಲ್ ಹಖ್ ಮಝ್‌ಹರ್ ಸಾಹಿಬ್‌ರದ್ದಾಗಿದೆ. ಅವರು ಮೂಸಿಯಾಗಿದ್ದರು. ಅವರು ಬಹಳ ಸಹನೆಯುಳ್ಳ, ಧೈರ್ಯಶಾಲಿ, ತಹಜ್ಜುದ್ ನಿರ್ವಹಿಸುವ, ಐದು ಹೊತ್ತಿನ ನಮಾಝ್ ಅನುಷ್ಠಿಸುವ, ಪವಿತ್ರ ಖುರ್‌ಆನಿನ ಪಾರಾಯಣದಲ್ಲಿ ಆಸಕ್ತಿ ಹೊಂದಿದ್ದ, ಉದಾರಿ, ನಿರ್ಗತಿಕರ ಸಹಾಯ ಮಾಡುವ, ಒಳ್ಳೆಯ ಪ್ರಸಿದ್ಧಿಯನ್ನು ಪಡೆದಿದ್ದ ವ್ಯಕ್ತಿಯಾಗಿದ್ದರು. ದಿವಂಗತರ ಪುತ್ರನಾದ ರಾಗಿಬ್ ಝಿಯಾಉಲ್ ಹಖ್ ಮತ್ತು ಪುತ್ರಿಯಾದ ಅಮತುಲ್ ಮತೀನ್ ಸಾಹಿಬ್ ಜಮಾಅತಿನ ಸೇವೆಯಲ್ಲಿ ಇದ್ದ ಕಾರಣದಿಂದ ತಂದೆಯ ಜನಾಝುದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

ಮೂರನೆಯದಾಗಿ ರಬ್ವದ ಮುಹಮ್ಮದ್ ಶಫೀಅ್ ಸಾಹಿಬ್‌ರ ಪತ್ನಿಯಾದ ಅಮತುಲ್ ಹಫೀಝ್ ನಿಗ್‌ಹತ್ ಸಾಹಿಬ ಅವರದ್ದಾಗಿದೆ. ದಿವಂಗತರು ಉಪವಾಸ, ನಮಾಝ್ ನಿರ್ವಹಿಸುವ, ದುಆ ಮಾಡುವ, ಖಿಲಾಫತಿನೊಂದಿಗೆ ಅಪಾರ ಪ್ರೀತಿ ಹೊಂದಿದ್ದ ತಬ್ಲೀಗಿನ ಆಸಕ್ತಿ ಹೊಂದಿದ್ದ, ಬಡವರ ಮತ್ತು ರೋಗಿಗಳ ಕಾಳಜಿ ವಹಿಸುವ ಮತ್ತು ಉನ್ನತ ನೈತಿಕ ಗುಣಗಳನ್ನು ಹೊಂದಿದ್ದ ಮಹಿಳೆಯಾಗಿದ್ದರು.

(ಹುಝೂರ್ ಎಲ್ಲ ದಿವಂಗತರ ಮಗ್‌ಫಿರತ್ ಮತ್ತು ಉನ್ನತ ಪದವಿಗಳಿಗಾಗಿ ದುಆ ಮಾಡಿದರು.)

*****

اَلْحَمْدُلِلّٰہِ نَحْمَدُہٗ وَنَسْتَعِیْنُہٗ وَنَسْتَغْفِرُہٗ وَنُؤْمِنُ بِہٖ وَنَتَوَکَّلُ عَلَیْہِ وَنَعُوْذُ بِاللّٰہِ
مِنْ شُرُوْرِ اَنْفُسِنَا وَمِنْ سَیِّاٰتِ اَعْمَالِنَا مَنْ یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ
فَلَاھَادِیَ لَہٗ ۔ وَنَشْھَدُ اَنْ لَّآ اِلٰہَ اِلَّا اللّٰہُ وَنَشْھَدُاَنَّ مُحَمَّدًا عَبْدُہٗ وَرَسُوْلُہٗ
عِبَادَ اللّٰہِ رَحِمَکُمُ اللّٰہُ اِنَّ اللّٰہَ یَاْمُرُ بِالْعَدْلِ وَالْاِحْسَانِ وَاِیْتَاءِ ذِی الْقُرْبٰی
وَیَنْھٰی عَنِ الْفَحْشَآءِ وَالْمُنْکَرِ وَالْبَغْیِ یَعِظُکُمْ لَعَلَّکُمْ تَذَکَّرُوْنَ ۝ اُذْکُرُوااللّٰہَ
یَذْکُرْکُمْ وَادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ۔


***Friday Sermon delivered by Hadrath Khaleefatul Masih Al Khamis***(atba)
*At, **'Masjid Mubarak'**, Islamabad, Tilford, UK.* On 19-07-2024
**Summarized by** *Majlis Ansarullah Bharat*
***Kannada Translation**:* Moulavi Inamullah for Kannada Desk, Qadian
***Reviewed by**:* M.P Ibrahim | ***Layout**:* Basheer K.P. Manjeshwar
***Published By**:* Kannada Isha'at Team for Nazarath Nashr-O-Isha'ath, Qadian
***Email**: khutuba.kannada@gmail.com*
**You can find all the Sermons archived at**: www.alislam.org/friday-sermon